ಇ) ಪ್ರವಾಹದಿಂದ ಕಬ್ಬು, ಮೆಕ್ಕೆ ಜೋಳ, ಸೋಯಾ ಬೀನ್, ಭತ್ತ, ಜೋಳ ಸೇಂಗಾ, ದ್ರಾಕ್ಷಿ, ಬಾಳೆ ಆಲೂಗಡ್ಡೆ, ಮಾವು ಹುರಳಿ, ರೇಷ್ಮೆ, ಹತ್ತಿ, ಸಜ್ಜೆ, ಸೂರ್ಯಕಾಂತಿ, ತರಕಾರಿ ಬೆಳೆಗಳು, ನಿಂಬೆ, ತೊಗರಿ, ಉಳ್ಳಾಗಡ್ಡಿ, ಬೆಳೆಗಳು ಹಾಳಾಗಿರುತ್ತವೆ ಹಾಗೂ ಜನಗಳ ವಾಸದ ಮನೆಗಳು, ಗ್ರಾಮೀಣ ರಸ್ತೆಗಳು, ಮೋರಿಗಳು, ಕುಡಿಯುವ ನೀರಿನ ಯೋಜನೆಗಳು, ಸರ್ಕಾರಿ ಕಟ್ಟಡಗಳು, ಶಾಲೆ/ ಹಾಸ್ಟೆಲ್ ಕಟ್ಟಡಗಳು, ಕೆರೆಗಳು, ವಿದ್ಯುತ್ ಉಪಕರಣಗಳು, ಚರಂಡಿಗಳು, ಕೆಳಮಟ್ಟದ ರಸ್ತೆ ಸೇತುವೆಗಳು ಇತ್ಯಾದಿ ಹಾಳಾಗಿರುತ್ತವೆ.

ಈ) ನೀಡಿರುವ ಪರಿಹಾರ ಕೆಳಗಿನಂತಿರುತ್ತದೆ.

| | |
|---|---|
| ಬೆಳಗಾವಿ | ರೂ 1920.86 ಲಕ್ಷ |
| ಬಾಗಲಕೋಟೆ | ರೂ. 1212.58 ಲಕ್ಷ |
| ಬಿಜಾಪುರ | ರೂ. 365.48 ಲಕ್ಷ |
| ರಾಯಚೂರು | ರೂ. 629.23 ಲಕ್ಷ |
| ಗುಲ್ಬರ್ಗಾ | ರೂ. 626.67 ಲಕ್ಷ |

732 (547) ಶ್ರೀ ಚನ್ನಬಸವರಾಜ (ಅಪ್ಪಾಜಿ) ಶಂಕರರಾವ್ ನಾಡಗೌಡ: ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2003–04ನೇ ಸಾಲಿನಿಂದ 2006–07ನೇ ಸಾಲಿನ ವರೆಗೆ (ದಿನಾಂಕ: 31–12–2006) ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು) ;

ಆ) ಇಂತಹ ರೈತ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್ ವಸತಿ ನೀಡುವ ಕೇಂದ್ರ ಸರ್ಕಾರದ ಪ್ಯಾಕೇಜ್ ಅಡಿ ಕಳೆದ 3 ವರ್ಷಗಳ ಅವಧಿಯಲ್ಲಿ ನೀಡಲಾದ ಪರಿಹಾರವೆಷ್ಟು ಮತ್ತು ಕಲ್ಪಿಸಿದ ಪುನರ್ ವಸತಿಗಳಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು) ;

ಇ) ಈ ಸಂಬಂಧ ಕ್ರಿಯಾ ಯೋಜನೆ ಏನಾದರೂ ತಯಾರಿಸಲಾಗಿದೆಯೇ; (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ನಾನಾ ಕಾರಣಗಳಿಂದ ಒಟ್ಟು 1301 ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ವರದಿಯಾಗಿದ್ದು, ಇದರ ಜಿಲ್ಲಾವಾರು, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ತಲಾ 1 ಲಕ್ಷ ರೂ.ಗಳಂತೆ ಪರಿಹಾರವನ್ನು ನೀಡಲಾಗುತ್ತಿದೆ. ಕೇಂದ್ರ ಸರ್ಕಾರವು ಹೆಚ್ಚು ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುವ ರಾಜ್ಯದ 6 ಜಿಲ್ಲೆಗಳಿಗೆ ಅಂದರೆ, ಬೆಳಗಾಂ, ಚಿಕ್ಕಮಗಳೂರು, ಹಾಸನ, ಕೊಡಗು, ಚಿತ್ರದುರ್ಗ ಮತ್ತು ಶಿವಮೊಗ್ಗ

ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕೃಷಿ ಇಲಾಖೆಗೆ 2006–07ನೇ ಸಾಲಿನಲ್ಲಿ 827.58 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ಇದರ ಜಿಲ್ಲಾವಾರು ವಿವರಗಳನ್ನು ಕೆಳಗೆ ನೀಡಲಾಗಿದೆ.

| | | ರೂ. ಲಕ್ಷಗಳಲ್ಲಿ |
|---|---|---|
| ಬೆಳಗಾಂ | – | 543.28 |
| ಚಿಕ್ಕಮಗಳೂರು | – | 39.62 |
| ಹಾಸನ | – | 56.97 |
| ಕೊಡಗು | – | 18.06 |
| ಚಿತ್ರದುರ್ಗ | – | 90.06 |
| ಶಿವಮೊಗ್ಗ | – | 79.29 |
| ಒಟ್ಟು | – | 827.58 |

ಇ) ಹೌದು. ಮೂರು ವರ್ಷಗಳ ಅವಧಿಗೆ ಕ್ರಿಯಾ ಯೋಜನೆಯನ್ನು ಈಗಾಗಲೇ ತಯಾರಿಸಲಾಗಿದ್ದು ಅದರ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

## ಅನುಬಂಧ–II

**ವಿಶೇಷ ಪ್ಯಾಕೇಜ್‌ನ ಬಳಕೆಗೆ ಇರುವ ಮಾರ್ಗಸೂಚಿಗಳು, ಕ್ರಿಯಾ ಯೋಜನೆ ಮತ್ತು ಅರ್ಹರಾಗುವ ರೈತರ ವಿವರ**

ಕೃಷಿ ಇಲಾಖೆಯ ಮೂಲಕ ಮಾನ್ಯ ಪ್ರಧಾನ ಮಂತ್ರಿಗಳು ವಿಶೇಷ ಪ್ಯಾಕೇಜ್ ಕಾರ್ಯಕ್ರಮದ ಅಡಿಯಲ್ಲಿ ಮೂರು ಘಟಕಗಳನ್ನು ಅನುಷ್ಠಾನಗೊಳಿಸಲು ಅನುಮತಿ ದೊರೆತಿದ್ದು ಘಟಕವಾರು ವಿವರಗಳು ಇಂತಿವೆ.

**I. ರೈತರಿಗೆ ರಿಯಾಯಿತಿಯಲ್ಲಿ ಬೀಜ ವಿತರಣಾ ಕಾರ್ಯಕ್ರಮ:**

1. ರೂ. 17,800.00 ಲಕ್ಷಗಳನ್ನು ಮೂರು ವರ್ಷಗಳಿಗಾಗಿ ಮಂಜೂರು ಮಾಡಿದ್ದು ಎಲ್ಲಾ ವರ್ಗಗಳ ರೈತರಿಗೆ ಈ ಅನುದಾನದಲ್ಲಿ ಶೇ. 50 ರಿಯಾಯಿತಿಗಳನ್ನು ರಾಷ್ಟ್ರೀಯ ಬೀಜ ನಿಗಮದ ಮೂಲಕ ನೀಡಲಾಗುವುದು.
2. ಹಾಲಿ ರಾಜ್ಯ ಸರ್ಕಾರವು ಶೇ. 75 ರಿಯಾಯತಿಯಲ್ಲಿ ಬಿತ್ತನೆ ಬೀಜಗಳನ್ನು ಸಣ್ಣ / ಅತಿ ಸಣ್ಣ ರೈತರಿಗೆ ವಿತರಿಸುತ್ತಿದ್ದು ಶೇ. 25 ಪಾಲಿನ ರಿಯಾಯಿತಿ ಮೊತ್ತವನ್ನು ಭರಿಸುವುದು.
3. ಯೋಜನೆಯ ವರ್ಷವಾರು ವಿವರಗಳು ಇಂತಿವೆ.

| ಸಂ. | ವರ್ಷ | ವಿಸ್ತೀರ್ಣ (ಹೆಕ್ಟೇರ್) | ಒಟ್ಟು ಬೀಜ ಬೇಡಿಕೆ | ಬೀಜದ ಒಟ್ಟು ಮೌಲ್ಯ | ಶೇ. 50 ರಿಯಾಯಿತಿ (ಭಾರತ ಸರ್ಕಾರ) | ಶೇ. 25 ರಿಯಾಯಿತಿ (ರಾಜ್ಯ ಸರ್ಕಾರ) | ಶೇ. 25 ರೈತರ ವಂತಿಕೆ |
|---|---|---|---|---|---|---|---|
| | | | (ಕ್ವಿಂ) | (ರೂ. ಲಕ್ಷ) | (ರೂ. ಲಕ್ಷ) | (ರೂ. ಲಕ್ಷ) | (ರೂ. ಲಕ್ಷ) |
| 1. | 2006–07 | 62817 | 42216 | 1040.23 | 520.12 | 260.06 | 260.06 |
| 2. | 2007–08 | 1313540 | 593957 | 17279.88 | 8639.94 | 4139.97 | 4319.97 |
| 3. | 2008–09 | 1313540 | 593957 | 17279.88 | 8639.94 | 4139.97 | 4319.97 |
| | ಒಟ್ಟು | 2689897 | 1230130 | 35599.99 | 17800.00 | 8900.00 | 8900.00 |

**II. ಲಘು ನೀರಾವರಿ ಯೋಜನೆ:**

1. ಮೂರು ವರ್ಷಗಳಿಗೊಮ್ಮೆ ರೂ. 6400.00 ಲಕ್ಷಗಳ ಶೇ. 40 ರಿಯಾಯಿತಿ ಮೊತ್ತವನ್ನು ಭಾರತ ಸರ್ಕಾರ ನಿಗದಿ ಮಾಡಿದೆ.

2. ರಾಜ್ಯ ಸರ್ಕಾರವು ಕನಿಷ್ಠ ಶೇ. 10 ರಿಯಾಯಿತಿ ಮೊತ್ತವನ್ನು ಪೂರಕವಾಗಿ ನೀಡಬೇಕಿದ್ದು, ರೂ. 201 ಲಕ್ಷಗಳನ್ನು ಮಂಜೂರು ಮಾಡಿದೆ.

3. ಈ ಘಟಕದಡಿ ಎಲ್ಲಾ ವರ್ಗಗಳ ರೈತರಿಗೆ ಸೌಲಭ್ಯ ನೀಡಲಾಗುವುದು.

| ಸಂ. | ವರ್ಷ | ಶೇ. 40 ಭಾರತ ಸರ್ಕಾರದ ಪಾಲು (ಲಕ್ಷ ರೂ.ಗಳಲ್ಲಿ) | ಶೇ. 10 ರಾಜ್ಯ ಸರ್ಕಾರದ ಪಾಲು (ಲಕ್ಷ ರೂ.ಗಳಲ್ಲಿ) | ಶೇ. 50 ಫಲಾನುಭವಿಗಳ ಪಾಲು (ಲಕ್ಷ ರೂ.ಗಳಲ್ಲಿ) | ಒಟ್ಟು (ಲಕ್ಷ ರೂ.ಗಳಲ್ಲಿ) |
|---|---|---|---|---|---|
| 1. | 2006–07 | 827.58 | 207.24 | 985.76 | 2020.58 |
| 2. | 2007–08 | 2786.21 | 696.55 | 3482.76 | 6965.52 |
| 3. | 2008–09 | 2786.21 | 696.55 | 3482.76 | 6965.52 |
| | **ಒಟ್ಟು** | **6400.00** | **1610.34** | **7951.78** | **15951.62** |

**III. ಕೃಷಿ ವಿಸ್ತರಣಾ ಸೇವೆಗಳು:**

1. ಮೂರು ವರ್ಷಗಳಿಗೆ ರೂ. 300.00 ಲಕ್ಷಗಳ ಶೇ. 90 ಪಾಲಿನ ಮೊತ್ತವನ್ನು ಭಾರತ ಸರ್ಕಾರ ನಿಗದಿ ಮಾಡಿದೆ.
2. ರಾಜ್ಯ ಸರ್ಕಾರವು ಶೇ. 10 ಪಾಲಿನ ಮೊತ್ತವನ್ನು ಪೂರಕವಾಗಿ ನೀಡುತ್ತದೆ.
3. ಈ ಘಟಕದಡಿ ಎಲ್ಲಾ ವರ್ಗಗಳ ರೈತರಿಗೆ ತರಬೇತಿ ನೀಡುವುದು, ಅಧ್ಯಯನ ಪ್ರವಾಸ ಕೈಗೊಳ್ಳುವುದು, ಹೊಸ ತಂತ್ರಿಕತೆಗಳನ್ನು ಪರಿಚಯಿಸುವುದು, ತಾಂತ್ರಿಕತೆಗಳಿಗೆ ಸಂಬಂಧಿಸಿದ ಅಧ್ಯಯನ ಕೈಗೊಳ್ಳುವುದು ಕುರಿತಂತೆ ವೆಚ್ಚ ಭರಿಸಲು ಅವಕಾಶವಿದೆ.

| ಸಂ. | ವಾರ್ಷಿಕವಾರು ಕಾರ್ಯಕ್ರಮ | ಶೇ. 90 ಭಾರತ ಸರ್ಕಾರದ ಪಾಲು (ಲಕ್ಷ ರೂ.ಗಳಲ್ಲಿ) | ಶೇ. 10 ರಾಜ್ಯ ಸರ್ಕಾರದ ಪಾಲು (ಲಕ್ಷ ರೂ.ಗಳಲ್ಲಿ) | ಒಟ್ಟು (ಲಕ್ಷ ರೂ.ಗಳಲ್ಲಿ) |
|---|---|---|---|---|
| 1. | 2006–07 | 50.00 | 5.00 | 55.00 |
| 2. | 2007–08 | 125.00 | 12.00 | 137.00 |
| 3. | 2008–09 | 125.00 | 12.00 | 137.00 |
| | **ಒಟ್ಟು** | **300.00** | **30.00** | **330.00** |

ಪ್ರಶ್ನೆ–547

ಅನುಬಂಧ–1

| ಸಂ. | ಜಿಲ್ಲೆಗಳು | ವರದಿಯಾದ ಪ್ರಕರಣಗಳು | ತಿರಸ್ಕೃತ ಪ್ರಕರಣಗಳು | ಇತ್ಯರ್ಥವಾಗಿ ಚಕ್ ನೀಡಿದ ಪ್ರಕರಣಗಳು | ಹೆಚ್ಚುವರಿ ಮಾಹಿತಿಗಾಗಿ ಸಮಿತಿಯಲ್ಲಿ ಬಾಕಿ ಇರುವ ಪ್ರಕರಣಗಳು | ಲಘುನೀರಾವರಿ ಘಟಕದಡಿ ಕೇಂದ್ರ ಸರ್ಕಾರದಿಂದ ಬಿಡುಗೆಯಾದ ಅನುದಾನ ರೂ. ಲಕ್ಷ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ಬೆಳಗಾವಿ | 107 | 55 | 50 | 2 | 543.00 |
| 2. | ತುಮಕೂರು | 69 | 27 | 36 | 6 | – |
| 3. | ಬೆಂಗಳೂರು (ಗ್ರಾ) | 44 | 10 | 34 | 0 | – |
| 4. | ಚಿತ್ರದುರ್ಗ | 93 | 59 | 33 | 1 | 90.00 |
| 5. | ಹಾಸನ | 139 | 108 | 29 | 2 | 57.58 |
| 6. | ಚಿಕ್ಕಮಗಳೂರು | 66 | 28 | 26 | 12 | 40.00 |
| 7. | ಕೊಡಗು | 47 | 17 | 20 | 10 | 18.00 |
| 8. | ಬಳ್ಳಾರಿ | 50 | 28 | 21 | 1 | – |
| 9. | ಗುಲ್ಬರ್ಗಾ | 34 | 12 | 22 | 0 | – |
| 10. | ಶಿವಮೊಗ್ಗ | 81 | 60 | 21 | 0 | 79.00 |
| 11. | ಕೊಪ್ಪಳ | 60 | 36 | 22 | 2 | – |

| 1 | 2 | 3 | 4 | 5 | 6 | 7 |
|---|---|---|---|---|---|---|
| 12. | ಬೀದರ್ | 59 | 31 | 25 | 3 | – |
| 13. | ಕೋಲಾರ | 33 | 15 | 17 | 1 | – |
| 14. | ದಾವಣಗೆರೆ | 65 | 49 | 15 | 1 | – |
| 15. | ಉತ್ತರಕನ್ನಡ | 18 | 3 | 14 | 1 | – |
| 16. | ಹಾವೇರಿ | 52 | 38 | 11 | 3 | – |
| 17. | ಬಿಜಾಪುರ | 50 | 32 | 17 | 1 | – |
| 18. | ಮಂಡ್ಯ | 57 | 46 | 11 | 0 | – |
| 19. | ಗದಗ್ | 26 | 9 | 16 | 1 | – |
| 20. | ದ. ಕನ್ನಡ | 21 | 10 | 11 | 0 | – |
| 21. | ಬಾಗಲಕೋಟೆ | 37 | 29 | 8 | 0 | – |
| 22. | ರಾಯಚೂರು | 12 | 6 | 6 | 0 | – |
| 23. | ಧಾರವಾಡ | 42 | 38 | 4 | 0 | – |
| 24. | ಚಾಮರಾಜನಗರ | 14 | 11 | 3 | 0 | – |
| 25. | ಬೆಂಗಳೂರು (ನ) | 2 | 0 | 2 | 0 | – |
| 26. | ಮೈಸೂರು | 19 | 18 | 1 | 0 | – |
| 27. | ಉಡುಪಿ | 4 | 4 | 0 | 0 | – |
| | ಒಟ್ಟು | **1301** | **779** | **475** | **47** | **827.58** |